ಅಭಿಪ್ರಾಯ. ಎಲ್ಲಿ ಕಾಲೇಜು ಇರಬೇಕೆಂಬುದು ತಮಗೆ ಗೊತ್ತಿರುತ್ತದೆ. ನಾವು ತಮಗೆ ಮನವಿಯನ್ನು ಕೊಡುತ್ತೇವೆ. ಅದನ್ನು ತಾವು ಪರಿಗಣನೆಗೆ ತೆಗೆದುಕೊಳ್ಳದೇ ಇರಬಹುದು. ಆದರೆ ತಮ್ಮದೇ ಒಂದು ಆದ್ಯತೆ ಇರುತ್ತದೆ. ಅದು ಎಲ್ಲಿ ಆಗಬೇಕು, ಎಲ್ಲಿ ಆಗಬಾರದು ಎಂದು. ಅದನ್ನೂ ತಾವು ಯೋಚನೆ ಮಾಡದೆ, ನಮ್ಮ ಮನವಿಯನ್ನೂ ಪರಿಶೀಲನೆ ಮಾಡದೆ, ನಾವು ಕೊಟ್ಟಂಥ ಪ್ರಶ್ನೆಗೆ ''ಇಲ್ಲ'' ಎಂದ ಉತ್ತರವನ್ನು ಕೊಡುವುದಾದರೆ, ತಾವು ಯಾವ ನೀತಿಯ ಮೇಲೆ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರಿ? ಅದನ್ನಾದರೂ ಹೇಳಿ. ಬಹುಶಃ ನಮ್ಮ ಮನವಿಗೆ ಆದ್ಯತೆ ಕೊಡುವುದಿಲ್ಲ. ನಾವು ಕೊಟ್ಟಂಥ ಪ್ರಶ್ನೆಗಳಿಗೆ ತಾವು ಸರಿಯಾದ ಉತ್ತರವನ್ನೂ ಕಳುಹಿಸುವುದಿಲ್ಲ. ತಾವು ಯಾವ ಆದ್ಯತೆಯ ಮೇರೆಗೆ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸುತ್ತೇವೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಈ ವರ್ಷ ನಾವು ಒಂದೊಂದು ಜಿಲ್ಲೆಗೆ 2-2 ಪದವಿಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೇವೆ. ದ.ಕ.ಜಿಲ್ಲೆಗೆ ಈಗಾಗಲೇ ನಾವು 2 ಪದವಿಪೂರ್ವ ಕಾಲೇಜುಗಳನ್ನು ಕೊಟ್ಟಿದ್ದೇವೆ. ಇದರ ಅವಶ್ಯಕತೆ ಇದೆಯೆಂದು ಮಾನ್ಯ ಸದಸ್ಯರು ಹೇಳುವುದರಲ್ಲಿ ವಿಶೇಷವೇನೂ ಇಲ್ಲ. ಇನ್ನೂ ಅನೇಕ ಕಡೆ ಕೊಡಬೇಕಾದ ಅವಶ್ಯಕತೆ ಇದ್ದರೂ ಕೂಡ, 2 ಕಡೆ ಕೊಟ್ಟಿದ್ದೀರಿ, ನಮಗೆ ಕೊಟ್ಟಿಲ್ಲವೆಂದು ಅವರು ಕೇಳುತ್ತಿರುವುದರಿಂದ ಅವರಿಗೆ ಈ ಪದವಿಪೂರ್ವ ಕಾಲೇಜಿನ ಅವಶ್ಯಕತೆ ಇದೆ ಮತ್ತು ನಾವು ಕೊಡಬೇಕಾದುದು ಧರ್ಮವೂ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ 2 ಕಾಲೇಜುಗಳನ್ನು ಕೊಟ್ಟಿರುವುದರಿಂದ ಇಲ್ಲಿಗೆ ಕೊಡುವುದಕ್ಕಾಗಿಲ್ಲ. ನಾವು ಈಗ ಮ್ಯಾಪಿಂಗ್ ಮಾಡಿಸುತ್ತಿದ್ದೇನೆ. ಇನ್ನು ಮುಂದೆ ನಾವು ಯಾವುದೇ ಪದವಿ ಪೂರ್ವ ಕಾಲೇಜನ್ನು ಕೊಡುವಾಗ ಎಷ್ಟು ಕಿ.ಮೀ. ದೂರದಲ್ಲಿ ಇರಬೇಕೆಂಬುದನ್ನು ನೋಡಿ, ಅದನ್ನು ಕೊಡುವಾಗ ಸಂಬಧಪಟ್ಟ ಶಾಸಕರಿಗೂ ಹೇಳಿ, ಇಂಥಹ ಕಡೆ ನಾವು ಕೊಡಬೇಕಾಗುತ್ತದೆ, ಉಳಿದ ಕಡೆಗಳಲ್ಲಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗಿ ಈಗ ನಾವು ಮ್ಯಾಪಿಂಗ್ ಮಾಡುತ್ತಿದ್ದೇವೆ. 15 ಕಿ.ಮೀ. ಸುತ್ತಳತೆಯಲ್ಲಿ ಯಾವುದೇ ಕಾಲೇಜು ಇಲ್ಲವೆಂದು ಏನು ಹೇಳಿದ್ದೀರಿ ಇದನ್ನೂ ಕೂಡ ಮ್ಯಾಪಿಂಗ್‌ನಲ್ಲಿ ಯಾವ ರೀತಿ ಬರುತ್ತದೆಂದು ನೋಡಿ ವ್ಯವಸ್ಥೆ ಮಾಡುತ್ತೇನೆ.

ವಿಷಯ:- ಸಂಜೆ 6ಗಂಟೆ ನಂತರ ಪೋಸ್ಟ್‌ಮಾರ್ಟಂ ಮಾಡಲು ಅನುಮತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 49 (199)

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅಪಘಾತಗಳಲ್ಲಿ ಸತ್ತುಹೋದ ಮನುಷ್ಯರ ಹೆಣಗಳನ್ನು ಸಂಜೆ 6ಘಂಟೆಯ ನಂತರ ಪೋಸ್ಟ್ ಮಾರ್ಟಂ ಮಾಡುವುದು ಕಾನೂನು ವಿರುದ್ಧವೆ?

ಆ) ಇದರಿಂದ ಸಾರ್ವಜನಿಕರಿಗೆ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈಗ ವಿದ್ಯುತ್ ಸೌಕರ್ಯವಿರುವುದರಿಂದ ಸಂಜೆ 6 ಘಂಟೆಯ ಮೇಲೆ ಕೂಡಾ ಪೋಸ್ಟ್ ಮಾರ್ಟಂ ಮಾಡಲು ಸೂಕ್ತ ಆದೇಶ ನೀಡಲಾಗುವುದೇ?

ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ಅಂತಹ ಯಾವುದೇ ನಿಯಮ ಇರುವುದಿಲ್ಲ. ಶವ ಪರೀಕ್ಷೆಯನ್ನು ಹಗಲು ಹೊತ್ತಿನಲ್ಲೇ ಮಾಡತಕ್ಕದ್ದು. ಏಕೆಂದರೆ ಕೃತಕ ಬೆಳಕಿನಲ್ಲಿ ಶವ ಪರೀಕ್ಷೆಯಲ್ಲಿ ಕಂಡು ಬರುವ ಕಲೆಗಳು ವಿಷ ಸೇವನೆಯಿಂದ ರಕ್ತದಲ್ಲಾಗುವ ಬಣ್ಣ, ಕಾಮಾಲೆ ಬಣ್ಣ, ತಲೆಬುರುಡೆಯ ಮೂಳೆಯ ಮೇಲೆ ಉಂಟಾಗುವ ಕೂದಲೆಳೆಯಂತಹ ಬಿರುಕು ಕಂಡು ಹಿಡಿಯಲು ಸಾಧ್ಯವಿರುವುದಿಲ್ಲ. ಇದರಿಂದ ತಪ್ಪು ನಿರ್ಧಾರಕ್ಕೆ ಎಡೆಕೊಟ್ಟಂತಾಗುತ್ತದೆ. ನ್ಯಾಯ ನೀಡುವಿಕೆಯಲ್ಲಿ ತಪ್ಪಾಗುವುದು.

ಆ) ಇಲ್ಲ.

ಇ) ಉತ್ತರ (ಅ)ದಲ್ಲಿರುವಂತೆ.

ಶ್ರೀ ಎ.ರುಕ್ಮಯ್ಯ ಪೂಜಾರಿ:- ಈ ಉತ್ತರವನ್ನು ನೋಡಿದರೆ ತಮಾಷೆಯಾಗಿ ಕಾಣಿಸುತ್ತದೆ. ಸಂಜೆ 6 ಗಂಟೆಯನಂತರ ಪೋಸ್ಟ್ ಮಾರ್ಟಮ್ ಮಾಡುವುದಕ್ಕೆ ಸಂಬಂಧ ಪಟ್ಟಂತೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ತಾವು ಏನು ಉತ್ತರ ಕೊಟ್ಟಿದ್ದೀರೆಂದರೆ, 6 ಗಂಟೆಯ ನಂತರ ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಕಾನೂನು ಇಲ್ಲ. ಆದರೆ ಕೃತಕ ಬೆಳಕಿನಲ್ಲಿ ಶವ ಪರೀಕ್ಷೆಯಲ್ಲಿ ಕಂಡುಬರುವ ಕಲೆಗಳು, ವಿಷ ಸೇವನೆಯಿಂದ ರಕ್ತದಲ್ಲಾಗುವ ಬಣ್ಣ, ಕಾಮಾಲೆ ಬಣ್ಣ, ತಲೆಬುರುಡೆಯ ಮೂಳೆಯ ಮೇಲೆ ಉಂಟಾಗುವ ಕೂದಲೆಳೆಯಂಥ ಬಿರುಕುಗಳನ್ನು ಕಂಡುಹಿಡಿಯಲು ಸಾಧ್ಯವಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಅಂದರೆ ಇಲ್ಲಿ ಒಂದು ವಿಶೇಷತೆ ಇದೆ. ಜೀವಂತ ಇರುವಂಥ ವ್ಯಕ್ತಿಗಳನ್ನು ರಾತ್ರಿ ಹೊತ್ತು ಆಪರೇಷನ್ ಮಾಡುತ್ತೀರಿ. ಅದೇ ರೀತಿ ಸತ್ತ ವ್ಯಕ್ತಿಗಳ ಶವವನ್ನು ಪರೀಕ್ಷೆ ಮಾಡುವುದಕ್ಕಾಗುವುದಿಲ್ಲವೇ? ಇಷ್ಟು ಮಾತ್ರವಲ್ಲ, 6 ಗಂಟೆಯ ನಂತರ ಪೋಸ್ಟ್‌ಮಾರ್ಟಮ್ ಮಾಡದಿದ್ದರೆ, ಗ್ರಾಮಾಂತರ ಪ್ರದೇಶದ ಬಡಜನರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಹಳ್ಳಿಗಳಲ್ಲಿ ಯಾವುದಾದರೂ ಆಕ್ಸಿಡೆಂಟ್ ಆದರೆ, ಅಥವಾ ವಿಷ ಕುಡಿದು ಸತ್ತರೆ, ಅಂದರೆ ಅಸ್ವಾಭಾವಿಕ ಮರಣ ಹೊಂದಿದವರನ್ನು ಆಸ್ಪತ್ರೆಗೆ ತರಬೇಕಾದರೆ ಸಂಜೆ 6 ಗಂಟೆಯ ಮೇಲಾಗುತ್ತದೆ. ನಿಮ್ಮ ಕಾನೂನಿನ ಪ್ರಕಾರ ಮಾರನೆಯ ದಿನದವರೆಗೂ ಕಾಯಬೇಕೆಂದರೆ ಬಹಳ ತೊಂದರೆಯಾಗುತ್ತದೆ.

ಡಾ.ಎಂ.ಶಂಕರನಾಯಕ್:- ಸಂಜೆ 6 ಗಂಟೆಯ ನಂತರ ಪೋಸ್ಟ್‌ಮಾರ್ಟಮ್ ಮಾಡಾಬಾರದೆಂದು ಕಾನೂನು ಏನೂ ಇಲ್ಲ. ಆದರೆ ವೈದ್ಯಕೀಯ ಶಿಕ್ಷಣದಲ್ಲಿ

ಜ್ಯೂರಿಸ್‌ಪ್ರೂಡೆನ್ಸ್ ಎಂದು ಒಂದು ಸಬ್ಜೆಕ್ಟ್ ಇದೆ. ಅದರಲ್ಲಿ ಪಾಠವನ್ನು ಹೇಳಿಕೊಡುವಾಗಲೇ ಹೇಳಿಕೊಡುತ್ತಾರೆ. ಅದರಲ್ಲೂ ಹಗಲು ಹೊತ್ತಿನಲ್ಲೇ ಮಾಡಿ ಎಂದು. ಕಾರಣವಾದರೂ ಇಷ್ಟೆ. ಆ ಶವದ ಮೇಲಿನ ರಕ್ತದ ಕಲೆಗಳು ಇರಬಹುದು, ಬೇರೆ ರೀತಿಯ ಕಲೆಗಳು ಇರಬಹುದು, ವಿಷದ ಕಲೆಗಳು ಇರಬಹುದು, ಕೂದಲಿಗೆ ಅಗಿರುವಂಥ ಫ್ರ್ಯಾಕಚರ್ಸ್ ಇರಬಹುದು, ಅಥವಾ ತಲೆಗೆ ಏಟುಬಿದ್ದಿರುವುದು ಇರಬಹುದು, ಬೇರೆ ಫ್ರ್ಯಾಕ್ಚರ್ಸ್ ಇರಬಹುದು. ರಾತ್ರಿಯ ಹೊತ್ತು ಅದನ್ನೆಲ್ಲಾ ಸರಿಯಾಗಿ ಐಡೆಂಟಿಫೈ ಮಾಡುವುದಕ್ಕಾಗುವುದಿಲ್ಲ ಎಂಬ ಉದ್ದೇಶದಿಂದ ಡೇ ಟೈಂ ಮಾಡುವುದು ಪ್ರಿಫರಬಲ್ ಎಂದು ಹೇಳಿದ್ದಾರೆ. ಅಂಥ ಎಮರ್ಜೆನ್ಸಿ ಇದ್ದರೆ ರಾತ್ರಿಯ ಹೊತ್ತೂ ಕೂಡ ಮಾಡಬಹುದು. ಆದರೆ ಡೇ ಟೈಂ ಮಾಡಿದಾಗ ವೈದ್ಯರು ಒಳ್ಳೆಯ ರಿಪೋರ್ಟ್‌ನ್ನು ಕೊಡಬಹುದೆಂಬ ದೃಷ್ಟಿಯಿಂದ ಈ ರೀತಿ ಮಾಡಿದೆ.

ಶ್ರೀ ಎ.ರುಕ್ಮಯ್ಯ ಪೂಜಾರಿ:- ಸಂಜೆ 6 ಗಂಟೆ ನಂತರ ಬಂದರೆ ಆಗಲೇ ಮಾಡಬಹುದೆಂದು ಸೂಚನೆಯನ್ನು ಕಳುಹಿಸಿಕೊಡಿ. ಏಕೆಂದರೆ ಕೆಲವು ಸಂದರ್ಭಗಳಲ್ಲಿ ಬಡವರಿಗೆ ಇದರಿಂದ ತುಂಬಾ ತೊಂದರೆಯಾಗುತ್ತದೆ. ಸಂಜೆ 6 ಗಂಟೆಯ ನಂತರ ಡಾಕ್ಟರ್‌ಗಳು ಯಾರೂ ಪೋಸ್ಟ್‌ಮಾರ್ಟಮ್‌ನ್ನು ಮಾಡುವುದೇ ಇಲ್ಲ.

ಶ್ರೀ ಹೆಚ್.ಶಿವಪ್ಪ:- ಈ ಹಿಂದೆ ಇದೇ ಪೋಸ್ಟ್‌ಮಾರ್ಟಮ್ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದು ಲಿಖಿತಮೂಲಕ ಬಂತು. ಸಂಜೆ 6 ಗಂಟೆ ನಂತರವೂ ಮಾಡಬಹುದೆಂದು ಮಾನ್ಯ ಮಂತ್ರಿಗಳು ಹೇಳಿದರು. 6 ಗಂಟೆ ಎಂದು ಆದೇಶ ಇರುವುದರಿಂದ ಡಾಕ್ಟರ್‌ಗಳಿಂದ ನಮ್ಮ ಓರಲ್ ರಿಕ್ವೆಸ್ಟ್ ಅಥವಾ ರೆಪ್ರೆಸೆಂಟೇಷನ್‌ಗೆ ಪುರಸ್ಕಾರ ಸಿಕ್ಕುವುದಿಲ್ಲ. ಯಾವಾಗಲೂ ಸಂಜೆ 6 ಗಂಟೆಗೇ ಸೂರ್ಯ ಮುಳುಗುವುದಿಲ್ಲ. ಸುಮಾರು 6 ತಿಂಗಳ ಕಾಲ ಸಂಜೆ 7 ಗಂಟೆಗೆ ಹೊತ್ತು ಮುಳುಗುತ್ತದೆ. ಅದುವರೆಗೂ ಬೆಳಕು ಇದ್ದೇ ಇರುತ್ತದೆ. ಆಪರೇಷನ್ ಮಾಡುವಾಗ ರಾತ್ರಿ ಹೊತ್ತೂ ಮಾಡುತ್ತಾರೆ. ಇದರಲ್ಲಿ ಏನು ತಪ್ಪಿದೆ? ನಮ್ಮ ಸ್ನೇಹಿತರು ಹೇಳಿದಂತೆ ಇದರಿಂದ ಈಗ ಬಹಳ ಜನರಿಗೆ ತೊಂದರೆಯಾಗುತ್ತದೆ. ಇದರಲ್ಲಿ ರೂಲ್ಸ್ ಇಲ್ಲ ಎಂದು ಹೇಳಿದಾಗ ರಾತ್ರಿ ಹೊತ್ತು 8-9 ಗಂಟೆಯವರೆಗೂ ಮಾಡಲಿ ಎಂದು ಏತಕ್ಕೆ ಸರ್ಕಾರ ನಿರ್ದೇಶನ ಕೊಡಬಾರದು? Unless directions are issued, Doctors will never conduct Postmortem. So I request the Hon. Minister through the Hon'ble Speaker to issue such directions.

ಡಾ:ಎಂ.ಶಂಕರನಾಯಕ್:- ಆಪರೇಷನ್ ಮಾಡಬೇಕಾದರೆ ಇರುವಂಥ ಬೆಳಕಿನ ಪ್ರಮಾಣವೇ ಬೇರೆ. ಆಪರೇಷನ್ ಥಿಯೇಟರ್‌ನಲ್ಲಿ ಸರ್ಜರಿಗೆ ಬೇಕಾದಂಥ ಬೆಳಕು ಇರುತ್ತದೆ, ಆ ಬೆಳಕಿನಲ್ಲಿ ಆಪರೇಷನ್ ಮಾಡುತ್ತಾರೆ. ಮಾನ್ಯ ಶಿವಪ್ಪನವರು ಹೇಳಿದಂತೆ ಕೆಲವುಸಾರಿ ಸಂಜೆ 6 ಗಂಟೆಗೆ, ಇನ್ನು.ಕೆಲವು ದಿವಸ ಸಂಜೆ 7 ಗಂಟೆಗೆ ಕತ್ತಲಾಗಬಹುದು. ಆದರೆ ಕತ್ತಲಾಗುವುದಕ್ಕೆ ಮುಂಚೆ ಮಾಡಿ ಎಂದು ನಿರ್ದೇಶನವನ್ನು ನಾವು

ಕೊಡಬಹುದೇ ಹೊರತು ಇನ್ನೇನೂ ಹೇಳುವುದಕ್ಕಾಗುವುದಿಲ್ಲ. ಯಾವ ಕಾರಣಕ್ಕಾಗಿ ರಾತ್ರಿ ಹೊತ್ತು ಮಾಡುವಂತಿಲ್ಲ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಕೆಲವುಸಾರಿ ಪೋಸ್ಟ್‌ಮಾರ್ಟಮ್ ಮಾಡುವಾಗ ಕರೆಂಟ್ ಹೋದರೂ ಕೂಡ.....

ಶ್ರೀ ಹೆಚ್.ಶಿವಪ್ಪ:- ನೀವು ಕೊಡುವುದು ವೇಗ್ ಡೈರೆಕ್ಷನ್ ಆಗುತ್ತದೆ. ಕೊನೇಪಕ್ಷ 7 ಗಂಟೆವರೆಗೆ ಅಂತಲಾದರೂ ನಿರ್ದಿಷ್ಟವಾದ ನಿರ್ದೇಶನ ಕೊಡಬೇಕು.

ಡಾ:ಎಂ.ಶಂಕರನಾಯಕ್:- 6 ಗಂಟೆ ಎಂದು ಇರುವುದು ಸರಿಯಾಗಿದೆ ಎಂಬುದು ನನ್ನ ಭಾವನೆ.

ಶ್ರೀ ಹೆಚ್.ಶಿವಪ್ಪ:- ನೀವು ಅಷ್ಟಾದರೂ ಕೊಡದಿದ್ದರೆ ಎರಡೂ ಕಡೆಗೆ ಹೇಳಿದಂತಾಗುತ್ತದೆ.

ಶ್ರೀ ಹೆಚ್.ಸಿ.ಮಹದೇವಪ್ಪ:- ಸಂಜೆ 6 ಗಂಟೆಯ ನಂತರ ಪೋಸ್ಟ್‌ಮಾರ್ಟಮ್‌ನ್ನು ಮಾಡಿಕೊಡಬೇಕೆಂಬ ಹಿನ್ನೆಲೆ ಎಂದರೆ ಗ್ರಾಮೀಣ ಪ್ರದೇಶದಲ್ಲಿ ಅಸ್ವಾಭಾವಿಕ ಸಾವನ್ನು ಹೊಂದಿದ್ದಂಥ ಬಡಜನರಿಗೆ ಅವರ ಶವಸಂಸ್ಕಾರವನ್ನು ಮಾಡುವುದಕ್ಕೆ ಆಗುವಂಥ ಅನಾನುಕೂಲತೆ ಮತ್ತು ವೈದ್ಯರುಗಳಿಗೆ ಸರ್ಕಾರದಿಂದ ಒಂದು ಸೂಚನೆ ಬಂದಿರುವುದರಿಂದ ಆ ಶವಸಂಸ್ಕಾರವನ್ನು ಮಾಡುವುದಕ್ಕೆ, ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಹಿಂಜರಿಯುವ ಹಿನ್ನೆಲೆಯನ್ನು ಅರ್ಥಮಾಡಿಕೊಂಡು ಆಪರೇಷನ್‌ನ್ನು ಯಾವ ಸಂದರ್ಭದಲ್ಲೂ ಮಾಡುವುದಕ್ಕೆ ಬೇಕಾದಂಥ ಉತ್ತಮ ಬೆಳಕನ್ನು ಒದಗಿಸಿಕೊಟ್ಟಿದ್ದೇವೆ. ಇದಕ್ಕೂ ಕೂಡ ಉತ್ತಮ ಬೆಳಕಿನ ವ್ಯವಸ್ಥೆಯನ್ನು ಒದಗಿಸಿ ಮಾಡಿಸುವುದಕ್ಕೆ ಸರ್ಕಾರದ ವತಿಯಿಂದ ಸಾಧ್ಯವಿದೆ. ಗ್ರಾಮೀಣ ಪ್ರದೇಶದ ಜನರು ಅಸ್ವಾಭಾವಿಕವಾದ ಸಾವು ಎಂದರೆ ಮೆಡಿಕೋ ಲೀಗಲ್ ಕೇಸಿನಲ್ಲಿ ಮಿಸ್ ಇಂಟರ್‌ಪ್ರಿಟೇಷನ್ ಆಗಬಹುದೆಂಬ ಉದ್ದೇಶದಿಂದ ಸೂರ್ಯ ಮುಳುಗಿದಮೇಲೆ ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಅನಾನುಕೂಲ ಆಗಬಹುದೆಂಬ ಕಾರಣಕ್ಕೇ ಸೀಮಿತವಾಗಿದ್ದರೂ ಗ್ರಾಮೀಣ ಪ್ರದೇಶದಿಂದ ಬಂದಂಥ ಜನರು ಅಸ್ವಾಭಾವಿಕ ಸಾವನ್ನು ಅಪ್ಪಿದಂಥ ಸಂದರ್ಭದಲ್ಲಿ ಕನಿಷ್ಟ ಪ್ರಮಾಣದ ಬೆಳಕನ್ನು ಒದಗಿಸಿ ಶವಪರೀಕ್ಷೆ ಮಾಡುವುದಕ್ಕೆ ಕಾನೂನಿನಲ್ಲಿ ಎಲ್ಲಾ ಅವಕಾಶ ಇದೆ. ಇದನ್ನು ಸರ್ಕಾರ ಪರಿಶೀಲಿಸುತ್ತದೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

11.40 ಎ.ಎಂ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಡಾಕ್ಟರುಗಳ್ಳು ಬಹಳ ಕಡಿಮೆ ಇದ್ದಾರೆ. ಪೋಸ್ಟ್ ಮಾರ್ಟಂ ಮಾಡತಕ್ಕ ವಿಕ್ಟೋರಿಯಾ ಆಸ್ಪತ್ರೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ಇವತ್ತು ಬೆಳಿಗ್ಗೆ ಹೋದರೆ ನಾಳೆ ಬೆಳಗಿನವರೆಗೆ ಒಬ್ಬ ಡಾಕ್ಟರು ಸಿಗುವುದಿಲ್ಲ. ಇವತ್ತು ಪೋಸ್ಟ್ ಮಾರ್ಟಂ ಮಾಡಿ ಹೊರಟು ಹೋದರೆ ನಾಳೆ ಬೆಳಗಿನವರೆಗೆ ಒಬ್ಬ ಡಾಕ್ಟರೂ ಸಿಗುವುದಿಲ್ಲ. ಆದ್ದರಿಂದ ಈ ಪೋಸ್ಟ್ ಮಾರ್ಟಂ

ಮಾಡತಕ್ಕ ಡಾಕ್ಟರುಗಳ ಹುದ್ದೆಗಳನ್ನು ಹೆಚ್ಚು ಮಂಜೂರ್ಮಾಡಬೇಕಾಗುತ್ತದೆ. ಅದೂ ಒಂದು ಕಾರಣ ಇದೆ.

MR.SPEAKER:- No, No. I am an experienced man. ನಾನು ಹಳ್ಳಿಯಿಂದ ಬಂದವನು, ಹೇಳುತ್ತೇನೆ ಕೇಳಿ. Any Assistant Surgeon is competent to conduct a postmortem. Am I right? ಶಿವಪ್ಪನವರೇ ತಾವು ಕೇಳಿದ ಪ್ರಶ್ನೆಗೆ ಬೆಂಗಳೂರು ಮೈಸೂರಿನಲ್ಲಾದರೆ ಅನೇಕ ಕ್ಲಿನಿಕಲ್ ಫೆಸಿಲಿಟೀಸ್ ಇರುತ್ತದೆ. ಅದೇ ತಾಲ್ಲೂಕು ಆಸ್ಪತ್ರೆಯಲ್ಲಿ ಲೈಟ್ ಕಟ್ ಇರುತ್ತದೆ, ಗ್ರಾಮ ಸಹಾಯಕ ಅವನು ಪಾಪ, ಹೆಣಕ್ಕೆ ಕಾವಲು ಇರುತ್ತಾನೆ. ನಮ್ಮ ಹಳ್ಳಿಯಲ್ಲಿ ಯುಡಿಆರ್ ಆದ ತಕ್ಷಣ ಪೋಲೀಸ್ ಸ್ಟೇಷನ್ನಿಗೆ ರಿಪೋರ್ಟ್ ಕೊಡುತ್ತಾರೆ. ಪೋಲೀಸ್ ಬಂದ ತಕ್ಷಣ ಮಹಜರ್ ರೆಡಿ ಮಾಡಿ, ಊರಿನಲ್ಲಿ ಕೆರೆ ಹತ್ತಿರ ಹಾಕಿಕೊಂಡು, ತೋಪುಗಳಲ್ಲಿ ಹಾಕಿಕೊಂಡು ಅಲ್ಲಿ ಪೋಸ್ಟ್ ಮಾರ್ಟಂ ಮಾಡತಕ್ಕದ್ದು. ಅಲ್ಲಿ 6 ಗಂಟೆ ಆದಮೇಲೆ ಮಾಡುವುದಕ್ಕೆ ಬರುವುದಿಲ್ಲ. ಮೆಡಿಕಲ್ ಕಾಂಪ್ಲಿಕೇಷನ್ ಇರುತ್ತದೆ, ಅದಕ್ಕೋಸ್ಕರ ಬೆಳಕಿನಲ್ಲಿ ಮಾಡುತ್ತಾರೆ. ಬೆಂಗಳೂರಿನಲ್ಲಿರುವವರಿಗೆ ಹಳ್ಳಿಯ ವಿಚಾರ ಗೊತ್ತಿರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನಾನು ಏನು ಹೇಳುತ್ತಿದ್ದೇನೆ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಏನು ಪೋಸ್ಟ್ ಮಾರ್ಟಂ ನಡೆಯುತ್ತಿದೆ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಬರತಕ್ಕ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏನಾಗುತ್ತಿದೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:- ನೀವು ಹೇಳಿದ್ದನ್ನು ನಾನು ಸುಧಾರಿಸಿ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಪೊರ್ಜರೀಸ್ ಎಂದು ಬಾಡಿ ಹೊರಗೆ ತೆಗೆದು ಪೋಸ್ಟ್ ಮಾರ್ಟಂ ಮಾಡಬೇಕಾದರೆ ಅವರ ಬಂಧುಗಳು ಜೀವಂತ ಯಾರಿರುತ್ತಾರೆ ಅವರು ಒಂದು ಸಾರಿ ಸಾಯಬೇಕಾಗುತ್ತದೆ. ಬಹಳ ಹಣ ಕೊಡಬೇಕಾಗುತ್ತದೆ. ಅದನ್ನು ತಪ್ಪಿಸಿ ಎಂದು ಅವರು ಹೇಳುವುದು. ಏನೇನೋ ಬೇರೆ ಬೇರೆ ಹೇಳುತ್ತೀರಿ, ನೇರವಾಗಿ ಮಾತನಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ತಾವು ಹೇಳಿದ್ದು ಸತ್ಯವಾಗುವುದು, ಅದೂ ಇದೆ. ಏಕೆಂದರೆ ಜೀವಂತ ಆದವರನ್ನೂ ಅಲ್ಲಿ ಒಳಗೆ ಹಾಕಿರುತ್ತಾರೆ. ಒಂದು ವಿಷಯ ತಮ್ಮ ಗಮನಕ್ಕೆ ತರುವುದೇನೆಂದರೆ ಯಾರಾದರೂ ಸತ್ತರೆ ಅವರ ಹೆಣ ಅಲ್ಲಿ ಹೋಗಿ ಸಂಸ್ಕಾರ ಮಾಡುವವರೆಗೆ ಮನೆಯಲ್ಲಿ ಯಾರೂ ಊಟ ಮಾಡುವುದಕ್ಕಾಗುವುದಿಲ್ಲ. ಪೋಸ್ಟ್ ಮಾರ್ಟಂಗೆ ನಾಳೆಯವರೆಗೂ ಕಾಯುವುದಾದರೆ ಹೆಂಡತಿ ಮಕ್ಕಳ ಗತಿ ಏನು?

ಅಧ್ಯಕ್ಷರು:- ಈಗ ಬೆಂಗಳೂರಿನಲ್ಲಿ ಮನೆಗಳಿಗೆ ಯಾರೂ ಹೋಗುವುದಿಲ್ಲ, ಕ್ಲಬ್‌ಗಳಿಗೆ ಹೋಗುತ್ತಾರೆ.

ಶ್ರೀ ಹೆಚ್.ಶಿವಪ್ಪ:- ಹಳ್ಳಿಗಳಲ್ಲಿ ಬಹಳ ತೊಂದರೆಯಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ಸತ್ತರೆ ಬೇಗ ಎರಡು ಗಂಟೆಗಳ ಒಳಗೆ ಸಂಸ್ಕಾರ ಆಗಬೇಕು. ಅದುದರಿಂದ ಆದಷ್ಟು ಬೇಗ ಸಂಸ್ಕಾರ ಮಾಡುವುದಕ್ಕೆ ಅವಕಾಶ ಮಾಡಬೇಕು. ನಿಧಾನವಾದರೆ ತೊಂದರೆಯಾಗುತ್ತದೆ, ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಂ.ಶ್ರೀನಿವಾಸ್:- ಸತ್ತವರ ಹೆಣಕ್ಕೆ ಅತ್ತರೆ, ಅಲ್ಲಿರತಕ್ಕವರು ಹಣಕ್ಕೆ ಅಳುತ್ತಾರೆ; ಅದನ್ನು ತಪ್ಪಿಸಬೇಕು.

ಶ್ರೀ ಎಸ್.ಸುರೇಶ್ ಕುಮಾರ್:- ಪೋಸ್ಟ್ ಮಾರ್ಟಂ ಬಗ್ಗೆ. ತಾವು ನಿನ್ನೆ ಮತ್ತು ಮೊನ್ನೆ ಇದೇ ಸಭೆಯಲ್ಲಿ ಹೇಳಿದಿರಿ, ಇವತ್ತು ಪೋಸ್ಟ್ ಮಾರ್ಟಂ ಬಗ್ಗೆ ನೋಡಿದಾಗ ಬೆಂಗಳೂರಿನಲ್ಲಿ One man's food is another man's poison ತರಹ ಆಗಿದೆ ಪೋಸ್ಟ್‌ಮಾರ್ಟಂನಲ್ಲಿ ದಿವಸ ಎರಡು ಊದಿನ ಕಡ್ಡಿ ಹಚ್ಚುತ್ತಾರೆ. ಇವತ್ತು ಯಾವುದಾದರೂ ಎರಡು ಮರ್ಡರ್ ಆಗಲಿ, 4 ಆಕ್ಸಿಡೆಂಟ್ ಆಗಲಿ ಎಂದು. ಯಾರು ಪೋಸ್ಟ್‌ಮಾರ್ಟಂಗೆ ತೆಗೆದುಕೊಂಡು ಹೋಗುತ್ತಾರೆ ಅವರ ಜೀವನವನ್ನು ನರಕಸದೃಶ ಮಾಡುತ್ತಾರೆ. ವ್ಯಾಪಕವಾದ ಭ್ರಷ್ಟಾಚಾರ. ಕೈಯಲ್ಲಿ ಕಂತೆಕಂತೆ ದುಡ್ಡು ಇಟ್ಟುಕೊಂಡರೂ ಕೂಡ ಅದು ಹೇಗೆ ಕರಗುತ್ತದೆ ಪೋಸ್ಟ್ ಮಾರ್ಟಂ ಸೆಂಟರ್‌ನಲ್ಲಿ ಎಂಬುದನ್ನು ನೋಡಬೇಕಾಗಿದೆ. ಬಡವರ ಮನೆಯಲ್ಲಿ ಇಂಥಹ ಅನಾಹುತ ಆಗಬಾರದೆಂದು ಬಯಸುತ್ತೇನೆ. ವ್ಯಾಪಕ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಬೆಂಗಳೂರಿನಲ್ಲಿ ಪೋಸ್ಟ್‌ಮಾರ್ಟಂ ಸೆಂಟರ್ಸ್ ಹೆಚ್ಚಿಸುವ ಯೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಎನ್.ರಾಜಣ್ಣ:- ಬೌರಿಂಗ್ ಆಸ್ಪತ್ರೆಯಲ್ಲಿ ಪೋಸ್ಟ್‌ಮಾರ್ಟಂ...

ಅಧ್ಯಕ್ಷರು:- ನಾನು ಕರೆಯುವುದು ಬೇಡವೇ ನಿಮ್ಮನ್ನು. ನೀವೇ ಹೀಗೆ ಎದ್ದುನಿಂತುಕೊಂಡರೆ ಹೇಗೆ? ಸ್ವಲ್ಪ ಕುಳಿತುಕೊಳ್ಳಿ, ಬೇರೆ ಎಲ್ಲಾ ಸದಸ್ಯರು ಕೈಯೆತ್ತಿ ಕುಳಿತಿದ್ದಾರೆ.

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್:- 6 ಗಂಟೆಯವರೆಗೆ ಎಂದು ಸರ್ಕಾರ ನಿಗಧಿ ಮಾಡಿದರೂ ಕೂಡ ಬಹಳ ಕಷ್ಟವಾಗುತ್ತದೆ. ಬೆಳಿಗ್ಗೆ ತೀರಿಹೋಗಿರುತ್ತಾರೆಂದು ಇಟ್ಟುಕೊಳ್ಳಿ, ಪೋಸ್ಟ್‌ಮಾರ್ಟಂಗೆ ಹೋಗುವ ಡಾಕ್ಟರುಗಳು ಬೇಕೆಂದೇ ಆ ಸಮಯದಲ್ಲಿ ಆಬ್ಸೆಂಟ್ ಆಗುವುದು. ಆಮೇಲೆ ಸುರೇಶ್ ಕುಮಾರ್ ಅವರು ಹೇಳಿದ ಹಾಗೆ ಅವರನ್ನು ಹೋಗಿ ನೋಡುವವರೆಗೆ ಪೋಸ್ಟ್‌ಮಾರ್ಟಂಗೆ ಬರುವುದಿಲ್ಲ. ಆರೀತಿ ಶವ ಇರುವಾಗ ಪೋಸ್ಟ್‌ಮಾರ್ಟಂ ತಕ್ಷಣ ಮಾಡಬೇಕು, ಬೆಳಿಗ್ಗೆ ಬಂದಿದ್ದರೆ ಕೂಡಲೇ ಅಟೆಂಡ್ ಮಾಡಬೇಕು. ಮಾಡದಿದ್ದರೆ ಅಂಥಹ ಡಾಕ್ಟರುಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು.

ಶ್ರೀ ಕೆ.ಅಮರನಾಥ ಶೆಟ್ಟಿ:- ಪೋಸ್ಟ್‌ಮಾರ್ಟಂ 6 ಗಂಟೆಯೊಳಗೆ ಮಾಡಬೇಕೆಂಬ ನಿಯಮ ಇದ್ದರೆ ಇನ್ನೊಂದು ಕಡೆ ಏನಾಗುತ್ತದೆಂದರೆ, ಹಳ್ಳಿಯಿಂದ ಆಸ್ಪತ್ರೆಗೆ

ಪೋಸ್ಟ್‌ಮಾರ್ಟಂಗೆ ಬರಬೇಕಾದರೆ 30-40-50 ಕಿಲೋಮೀಟರ್ ದೂರ ಇರುತ್ತದೆ. ಅಲ್ಲಿಗೆ ಬಾಡಿ ತರಬೇಕಾದರೆ ಆಸ್ಪತ್ರೆಯ ಆಂಬುಲೆನ್ಸ್ ದೊರೆತರೆ ಅನುಕೂಲ. ಆದರೆ ಆಂಬುಲೆನ್ಸ್‌ನಲ್ಲಿ ಹೆಣ ಹಾಕುವುದಿಲ್ಲವೆಂದು ಮಾಡಿದ್ದಾರೆ. ಬೇರೆ ಕಾರ್ ಮಾಡಿ ತರಬೇಕಾದರೆ ಒಂದು ಕಿಲೋಮೀಟರ್‌ಗೆ ಹತ್ತುರೂಪಾಯಿನಂತೆ ಚಾರ್ಜ್ ಮಾಡುತ್ತಾರೆ. ಹೀಗಾದರೆ ಹೆಣ ಹೇಗೆ ತರಬೇಕು? ಆದುದರಿಂದ ಹಳ್ಳಿಗೆ ಹೋಗಿ ಸ್ಪಾಟ್‌ನಲ್ಲಿ ಪೋಸ್ಟ್‌ಮಾರ್ಟಂ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬಹುದಲ್ಲವೇ?

MR.SPEAKER:- That is being done.

ಶ್ರೀ ಎಸ್.ಶಿವಾನಂದ ಪಾಟೀಲ್:- ತಾವು ಒಂದು ಮಾತು ಹೇಳಿದಿರಿ Assistant Surgeons are also conpetent to make a postmortem ಎಂದು. ಈಗ ರೀಸೆಂಟ್ ಆಗಿ ಬಿಎಎಂಎಸ್. ಆದವರನ್ನು ಆಪಾಯಿಂಟ್ ಮಾಡುತ್ತಾರೆ. ಅವರಿಗೂ ಕೂಡ ಅಸಿಸ್ಟೆಂಟ್ ಸರ್ಜನ್ ಎಂದು ಡೆಸಿಗ್‌ನೇಷನ್ ಕೊಡುತ್ತಾರೆ. But, they are not competent to make a postmortem. ಇದಕ್ಕೆ ಅವರಿಂದ ಏನಾದರೂ ಉತ್ತರ ಬರುತ್ತದೆಯೇ? ಏಕೆಂದರೆ only those who have passed MBBS are allowed to make postmortem.

ಶ್ರೀ ಡಾ:ಎಂ.ಶಂಕರನಾಯಕ್:- ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಬಿಎಎಂಎಸ್. ಡಾಕ್ಟರ್‌ಗಳು ಇರುತ್ತಾರೆ. They are not competent to conduct the postmortem. ಎಂಬಿಬಿಎಸ್ ಆದವರು ಅಸಿಸ್ಟೆಂಟ್ ಸರ್ಜನ್ ಇದ್ದರೆ ಮಾತ್ರ they are competent to do it.

ಶ್ರೀ ಎಸ್.ಶಿವಾನಂದ ಪಾಟೀಲ್:- ಇವರು ಏನು ಮಾಡುತ್ತಾರೆಂದರೆ, ಪಿಹೆಚ್‌ಯು. ಸೆಂಟರ್‌ಗಳಲ್ಲಿ ಎಂಬಿಬಿಎಸ್ ಡಾಕ್ಟರ್‌ಗಳನ್ನು ಹಾಕಿಲ್ಲ. They have posted specifically BAMS doctors. But, they are not competent to make postmortem.

ಅಧ್ಯಕ್ಷರು:- ಅವರನ್ನು ಹಾಕಿದ್ದಾರೆ, ಇವರನ್ನು ಹಾಕಿಲ್ಲ, ಇದೇ ಆಯಿತಲ್ಲಾ.

ಶ್ರೀ ಎಸ್.ಯೋಗೀಶ್ ಭಟ್:- ಅನೇಕ ಸಂದರ್ಭಗಳಲ್ಲಿ ಅನಾಥ ಶವಗಳು ಇರುತ್ತವೆ. ಅನಾಥ ಶವಗಳನ್ನು ಪೋಸ್ಟ್‌ಮಾರ್ಟಂ ಮಾಡಿ ಎಷ್ಟು ಸಮಯದೊಳಗೆ ಅದನ್ನು ದಫನ್ ಅಥವಾ ದಹನ ಮಾಡಬೇಕು. ಇನ್ನೊಂದು ಪ್ರಶ್ನೆ, ಅನಾಥ ಶವಗಳು ಏನಿರುತ್ತವೆ ಅವು ಜಿಲ್ಲಾ ಕೇಂದ್ರಗಳಲ್ಲಿ ಬಂದು ಬೀಳುತ್ತವೆ. ಅದನ್ನು ಎಷ್ಟು ಸಮಯದಲ್ಲಿ ದಹನ ಅಥವಾ ದಫನ್ ಅಥವಾ ಡಿಸ್‌ಪೋಸ್ ಮಾಡಬೇಕೆಂಬ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ.

ಡಾ:ಎಂ.ಶಂಕರನಾಯಕ್:- ಅನ್‌ಕ್ಲೈಮ್ಡ್ ಬಾಡೀಸ್ ಇದ್ದರೆ ಅವಕ್ಕೆ ಬೇಡಿಕೆಗಳು ಇದ್ದರೆ ಮೆಡಿಕಲ್ ಕಾಲೇಜುಗಳಿಂದ ಅಟಾಪ್ಸಿಗೆ ಮತ್ತೊಂದಕ್ಕೆ, ಆಗ ಅದಕ್ಕೆ ಸಾಗಿಸಲಿಕ್ಕೆ.

ಪ್ರಯತ್ನ ಮಾಡುತ್ತೇವೆ. ಇಲ್ಲದಿದ್ದರೆ ಫಾರ್ಮಲಿನ್ ಟ್ಯಾಂಕ್ಸ್ ಎಂದು ಏನು ಇರುತ್ತದೆ ಅದರಲ್ಲಿ 2-3 ದಿನ ಇಟ್ಟು ಯಾರಾದರೂ ಸಂಬಂಧಪಟ್ಟವರು ಬಂದರೆ ಕೊಡುತ್ತೇವೆ.

ಅಧ್ಯಕ್ಷರು:- ಫೋಟೋ ಎಲ್ಲಾ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ಡಿಸ್‌ಪ್ಲೇ ಮಾಡಿ ಅಡ್ವೆರ್ಟೈಸ್‌ಮೆಂಟ್ ಮಾಡಿ ಯಾರೂ ಬಂದು ಕ್ಲೈಂ ಮಾಡದಿದ್ದರೆ ಆಮೇಲೆ ಕೊಡುತ್ತಾರೆ.

ಶ್ರೀ ಎನ್.ಯೋಗೀಶ್ ಭಟ್:- ಹತ್ತು ದಿನಗಳ ಹಿಂದೆ ವೆನ್‌ಲಾಕ್ ಆಸ್ಪತ್ರೆ, ಮಂಗಳೂರಿನಲ್ಲಿ ಅಲ್ಲಿರತಕ್ಕ ಪೋಸ್ಟ್‌ಮಾರ್ಟಂ ಸೆಂಟರ್ ನೋಡಿದಾಗ 19 ಡೆಡ್ ಬಾಡಿಗಳು ಇದ್ದವು. ಆ ದೃಷ್ಟಿಯಿಂದ ಇದನ್ನು ತಮ್ಮ ಗಮನಕ್ಕೆ ವಿಶೇಷವಾಗಿ ತರುತ್ತಿದ್ದೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಚಿಕ್ಕಮಗಳೂರಿನಲ್ಲಿ ಬಹಳ ಜನ ಸಾಯುತ್ತಾರೆ. ಅದರಲ್ಲಿ ಯು.ಡಿ.ಆರ್. ಕೇಸಸ್ ಜಾಸ್ತಿ. ವಿಚಾರವೇನೆಂದರೆ, ಈಗ ಸರ್ಕಾರ ಒಂದು ಯೋಜನೆ ಹಾಕಿಕೊಂಡು ಇದರ ಬಗ್ಗೆ ನಾವು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಮುಖ್ಯವಾಗಿ ಇರುವಂಥ ಆಲೋಚನೆ ನಮ್ಮಲ್ಲಿ ಮತ್ತು ಸಾರ್ವಜನಿಕರಲ್ಲಿ ಏನೆಂದರೆ ಕೆಲವು ಆರೋಗ್ಯ ಘಟಕಗಳಲ್ಲಿ ಇಲ್ಲಿಯವರೆಗೆ ವೈದ್ಯರು ಇಲ್ಲದಿರುವ ಜಾಗಗಳು ಇವೆ. ಅಲ್ಲಿ ತೊಂದರೆಯಾಗುವುದರ ಬಗ್ಗೆ ಗಮನಿಸಿ ಇಂಥಹ ಹೆಣಗಳನ್ನು ಕೇಂದ್ರ ಆಸ್ಪತ್ರೆಗೆ ಸಾಗಿಸುವಂಥ ವ್ಯವಸ್ಥೆಯಲ್ಲಿ ನಾವು ಇವತ್ತು ಇಲ್ಲ. ಮಾನ್ಯ ಶಾಸಕ ಮಿತ್ರರ ಆತಂಕದ ಬಗ್ಗೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಅದಕ್ಕೆ ನಿಮಗೆ ರೂರಲ್ ಬ್ಯಾಕ್‌ಗ್ರೌಂಡ್ ಇರಬೇಕು. ಹೆಣವನ್ನು ಎಲ್ಲಿಯೂ ಸಾಗಿಸುವುದಿಲ್ಲ. ಸಂಬಂಧಪಟ್ಟ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದಿದ್ದರೆ ಪಕ್ಕದ ಆಸ್ಪತ್ರೆಯಿಂದ ವೈದ್ಯರನ್ನು ಡೆಪ್ಯೂಟ್ ಮಾಡುತ್ತಾರೆ. ಯಾರೂ ಹೆಣವನ್ನು ಟ್ರಾನ್ಸ್‌ಪೋರ್ಟ್ ಮಾಡುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಕೆಲವು ಕಡೆ 3-3 ಪಿಹೆಚ್‌ಸಿಗಳಲ್ಲಿ ಡಾಕ್ಟರುಗಳು ಇರುವುದಿಲ್ಲ.

ಅಧ್ಯಕ್ಷರು:- ಆ ತಾಲ್ಲೂಕಿನಲ್ಲಿ ವೈದ್ಯರು ಇಲ್ಲದೆ ಹೋದರೆ ಬೇರೆ ಕಡೆಯಿಂದ ಡಿಸ್ಟ್ರಿಕ್ಟ್ ಸರ್ಜನ್ ಅರೇಂಜ್ ಮಾಡುತ್ತಾರೆ. ಡಿಹೆಚ್‌ಒ. ಅರೇಂಜ್ ಮಾಡುತ್ತಾರೆ. ಆ ಹೆಣವನ್ನು ಎಲ್ಲಿಯೂ ಓಡಾಡಿಸುವುದಿಲ್ಲ. You have not undergone all these experience.

ಶ್ರೀ ಸಿ.ಆರ್.ಸಗೀರ್ ಅಹಮದ್:- ಪೋಸ್ಟ್‌ಮಾರ್ಟಂ ಮಾಡುವಂಥ ಜಾಗ ಇದೆಯಲ್ಲಾ.....

ಅಧ್ಯಕ್ಷರು:- ಮುಂದಿನ ಪ್ರಶ್ನೆಗೆ ಹೋಗೋಣ. We will move on to the next question.

ಶ್ರೀ ಬಿ.ಬಿ.ಶಿವಕುಮಾರ್:- ಮೊಬೈಲ್ ಸ್ಕ್ವಾಡ್ ಏನಿದ್ದಾರೆ ಅವರಿಗೆ ತಿಳಿಸತಕ್ಕ ವ್ಯವಸ್ಥೆ ಮಾಡಬಹುದು.

ಅಧ್ಯಕ್ಷರು:- ಅದು ಬಹಳ ಒಳ್ಳೆಯ ಸಲಹೆ.

ಶ್ರೀ ಜಿ.ಬಿ.ಶಿವಕುಮಾರ್:- ಏಕೆಂದರೆ ಅವರು ಯಾವುದೇ ಆಸ್ಪತ್ರೆಯಲ್ಲಿ ಇರಬಹುದು. ಆ ರೀತಿ ಒಂದು ಟೀಮ್ ಆಫ್ ಡಾಕ್ಟರ್ಸ್ ಇರುತ್ತಾರೆ. ಅವರಿಗೆ ತಿಳಿಸಿದರೆ ಒಳ್ಳೆಯದು. ಒಂದು ವೇಳೆ 10-12 ಜನ ಟೆಂಪೋ ಆ್ಯಕ್ಸಿಡೆಂಟಿನಲ್ಲಿ ಸತ್ತಿರುತ್ತಾರೆ. ಆ ಸಂದರ್ಭದಲ್ಲಿ ಸರ್ಕಾರ ಮಾಡಬೇಕಾದ ಕೆಲಸ ಅಂದರೆ.....

ಶ್ರೀ ಸಿ.ಆರ್.ಸಗೀರ್ ಅಹಮದ್:- ಆ ಕೊಠಡಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ತುರ್ತಾಗಿ ಇರುವಂತೆ ಮಾಡಬೇಕು.

MR.SPEAKER:- Postmortem is over now. Body is disposed off.

SRI S.SURESH KUMAR:- Post mortem is over. But, the report has not been submitted.

MR.SPEAKER:- He has taken note of it.

ವಿಷಯ:- ವಿಶ್ವಬ್ಯಾಂಕ್ ನೆರವಿನಿಂದ ಶಿಕಾರಿಪುರದ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 51 (212)

ಶ್ರೀ ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ವಿಶ್ವಬ್ಯಾಂಕ್ ನೆರವಿನಿಂದ ಶಿಕಾರಿಪುರದ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಏರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

2. ಈ ಆಸ್ಪತ್ರೆಗೆ 50,000ಕ್ಕೂ ಹೆಚ್ಚು ಹೊರರೋಗಿಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಈ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಏರಿಸುವ ಬಗ್ಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಅಡಚಣೆ ಏನಾದರೂ ಇದೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1. ಹೌದು.

2. ಬಂದಿದೆ.